– ವೇದ ಕಾಲದಲ್ಲಿ ವ್ಯಾಖ್ಯಾನಿಸಲು ಆಗ ಅವರಿಗೆ ಒಂದು ತರ್ಕಬದ್ಧವಾದ ಭಾಷೆ ಬೇಕಿತ್ತು. ಅದು ಸಂಸ್ಕೃತದಲ್ಲಿತ್ತು ಎಂದು ಧರ್ಮಗ್ರಂಥಗಳನ್ನು ಋಷಿಗಳು ಸಂಸ್ಕೃತದಲ್ಲಿ ಬರೆದರು. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ಧರ್ಮವನ್ನು ಜನರ ನಡುವಿಗೆ ತಂದು ಅರ್ಥೈಸಲು ಜನರ ಭಾಷೆಯಾಗಿ ಕನ್ನಡವನ್ನೇ ಬಳಸಿಕೊಂಡರು. ಇದು ಆಯಾಕಾಲದ ಅತ್ಯಗತ್ಯಗಳು. ಹಾಗಾಗಿ ಸಂಸ್ಕೃತ ಶ್ರೇಷ್ಠವೋ ಕನ್ನಡ ಕನಿಷ್ಠವೋ ಎಂಬ ಮಾತೇ ಇಲ್ಲ ಎನ್ನುವವನು ನಾನು' ಎಂದರು.

ಸುಧೀರ ಶೆಟ್ಟರು 'ಎಸ್, ನೀವು ಹೇಳಿದ್ದು ನೂರಕ್ಕೆ ನೂರು ಸತ್ಯ ಭಾವ. ಆದರೆ ಬುದ್ಧಿಜೀವಿಗಳೆನಿಸಿಕೊಂಡವರು ಕೆಲವು ಗೊಂದಲದ ಹೇಳಿಕೆಗಳನ್ನು ಕೊಡುವುದರಿಂದ ಜನರಲ್ಲಿ ಇರುವ ಗೊಂದಲಗಳು ಮತ್ತಷ್ಟು ಹೆಚ್ಚಾಗುತ್ತದೆ. ಉದಾಹರಣೆಗೆ, ಕೆಲವು ವರುಷಗಳ ಹಿಂದಿನ ನನ್ನ ನೆನಪಿನಲ್ಲಿ ಹೇಳುವುದಾದರೆ ನಾನಾಗ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ದಿನಗಳಲ್ಲಿ, ಕೇಂದ್ರ ಸರಕಾರವು ವೈಷ್ಣೋದೇವಿ ಚಿತ್ರವಿರುವ ಐದು ರೂಪಾಯಿಯ ನಾಣ್ಯವನ್ನು ಟಂಕಿಸಿತ್ತು. ಈ ಬುದ್ಧಿಜೀವಿಗಳು ಜಾತ್ಯತೀತ ರಾಷ್ಟ್ರಕಲ್ಪನೆಗೆ ಇದು ವಿರೋಧ ಎಂದು ಹುಯಿಲೆಬ್ಬಿಸಿದರು. ಆದರೆ ವಿಶ್ವದ ಹಲವೆಡೆ ಅಂದರೆ ಇಸ್ಲಾಂ ಧರ್ಮ ಹುಟ್ಟುವ ಮುಂಚೆ ಇಂದಿನ ಇಸ್ಲಾಂ ರಾಷ್ಟ್ರಗಳಲ್ಲೂ ಭಾರತೀಯ ಸಂಸ್ಕೃತಿ ಇತ್ತು ಎನ್ನುವುದು ರುಜುವಾತಾಗಿದೆ. ಈಗಲೂ ಮೂರ್ತಿ ಪೂಜೆಯನ್ನು ಒಪ್ಪದ ದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ದೇವದೇವಿಯರ ಮೂರ್ತಿಗಳು ಬೇಕಾದಷ್ಟು ಸುರಕ್ಷಿತವಾಗಿಯೇ ಇವೆ. ಇಂಡೋನೇಷ್ಯಾ, ಮಲೇಶ್ಯಾಗಳಲ್ಲೂ ಭಾರತೀಯ ಸಂಸ್ಕೃತಿಯ ಬೇರುಗಳು ಇದ್ದುವು ಮತ್ತು ಅದಕ್ಕೆ ಅಲ್ಲಿಯ ಸರಕಾರ ಈಗಲೂ ಭಂಗ ತರುತ್ತಿಲ್ಲ. ಆಶ್ಚರ್ಯದ ವಿಷಯ ಅಂದರೆ, ನಮ್ಮ ದೇಶದಿಂದ ಸಾಕಷ್ಟು ದೂರ ಇರುವ ಆಫ್ರಿಕಾದಲ್ಲಿ ಈಚೆಗೆ ಉತ್ಖನನ ನಡೆಸಿದಾಗ ಅಲ್ಲಿ ಗಣೇಶನ ಲೋಹದ ಮೂರ್ತಿಗಳು ಸಿಕ್ಕಿವೆ ಎನ್ನುವುದು ಜಾಹೀರು ಆಗಿದೆ. ಸೌದಿಬಳಿ ನಡೆದ ಉತ್ಖನನದಲ್ಲಿ ಅರ್ಧನಾರೀಶ್ವರ ಮೂರ್ತಿ ಸಿಕ್ಕಿದೆಯಂತೆ ಮತ್ತು ಅದನ್ನು ನಾಯಿಲಾ ದೇವತೆಯೆಂದು ಕರೆಯಲಾಗುತ್ತಿದೆ ಎಂದು ಕೇಳಿದ್ದೇನೆ. ಇನ್ನೂ ಕುತೂಹಲದ ಸಂಗತಿ ಅಂದರೆ, ಇಂಡೋನೇಷ್ಯಾ ಇಸ್ಲಾಂ ರಾಷ್ಟ್ರವಾದರೂ ಮೂರ್ತಿ ಪೂಜೆಗೆ ಅಲ್ಲಿ ಸ್ಥಾನ ಇಲ್ಲದಿದ್ದರೂ ನಮ್ಮ ಸರಸ್ವತಿ ಮೂರ್ತಿಯೊಂದಿಗೆ ಆ ರಾಷ್ಟ್ರವು ಭಾವನಾತ್ಮಕ ಸಂಬಂಧ ಇಟ್ಟುಕೊಂಡಿದೆ ಎಂದು ಕೇಳಿದ್ದೇನೆ. ಆದರೆ ಇದು ನಮ್ಮ ಸಂಸ್ಕೃತಿಗೆ ಸಂಬಂಧಿಸಿದುದು ಎಂದು ನಾವು ಬೀಗುವ ಅಗತ್ಯ ಇಲ್ಲ. ಅಥವಾ ಮೂರ್ತಿ ಪೂಜೆಯಲ್ಲಿ ನಂಬಿಕೆ ಇಲ್ಲದವರನ್ನು ನಮಗಿಂತ ಕನಿಷ್ಠರು ಎಂದು ನಾವು ಪರಿಭಾವಿಸುವ ಅವಶ್ಯಕತೆಯೂ ಇಲ್ಲ. ದುರದೃಷ್ಟ ಅಂದರೆ ನಮ್ಮಲ್ಲಿನ ಮೂಲಭೂತವಾದಿಗಳೂ ಪ್ರಗತಿಪರರೂ ಇಂಥ ವಿಚಾರಗಳಲ್ಲಿ ಎಡ–ಬಲ ಎಂದು ಹಂಚಿ ಹೋಗಿದ್ದಾರೆ. ನನಗೆ ಅನಿಸುವ ಹಾಗೆ ಈ ಎರಡೂ ಪಂಥದವರು ಸತ್ಯವನ್ನು ಹುಡುಕುವುದು ಅಂದರೆ ಕುರುಡರು ಆನೆಯನ್ನು ಗುರುತಿಸಿದ ಹಾಗೆ ಎಂದು ಅನಿಸಿದೆ. ಏನೆನ್ನುತ್ತೀರಿ?' ಎಂದರು.

ರಾಯರು, 'ಗುಡ್ ನೀವು ನನ್ನನ್ನು ಬೆಂಬಲಿಸಿದ್ದು ಸಂತೋಷವಾಯ್ತು. ಥ್ಯಾಂಕ್ಸ್ ಎ ಲಾಟ್' ಎಂದರು.

ಸರೋಜಮ್ಮ ಮತ್ತು ಸದಾಶಿವಶೆಟ್ಟರಿಗೆ ಸುಧೀರ್ ಶೆಟ್ಟರ ವ್ಯಾಖ್ಯಾನ ಪೂರ್ತಿ ಅರ್ಥವಾಗಲಿಲ್ಲ. ಅವರಿಬ್ಬರೂ ಅದಕ್ಕೆ ಪ್ರತಿಕ್ರಿಯೆ ತೋರಿಸದೆ ಸುಮ್ಮನಾದದ್ದು ನೋಡಿ ರಾಯರೇ 'ನಿನ್ನ ಅಣ್ಣನೇ ನನ್ನನ್ನು ಒಪ್ಪಿಕೊಂಡರಲ್ಲ!' ಎಂದು ಹೆಂಡತಿಗೆ ಮೆತ್ತಗೆ ತಿವಿದರು.

ಸರೋಜಮ್ಮ 'ನೀವು ಗಂಡಸರೇ ಹೀಗೆ. ಒಬ್ಬರಿಗೊಬ್ಬರು ಬಿಟ್ಟುಕೊಡುವ ಜಾತಿಯವರಲ್ಲ!' ಎಂದು ಎದ್ದು ನಿಂತು, 'ನಾವು ಇಲ್ಲಿ ಊಟ ಮುಗಿಸಿಹೋಗುವುದೋ ಅಥವಾ ಮನೆಗೆ ಹೋದ ಮೇಲೆ ಊಟವೋ?' ಎಂದು ಪ್ರಶ್ನಿಸಿದರು ಆಗ ಅವರಲ್ಲಿ ತಾನು ಇಲ್ಲಿನ ಅಡುಗೆ ಮನೆಯ ಯಜಮಾನಿ ಎನ್ನುವ ಭಾವ ಇತ್ತು. ರಾಯರು 'ಎರಡೂ ಸರಿಯೇ' ಎನ್ನುತ್ತಿದ್ದಂತೆ ಸುಧೀರ್ ಶೆಟ್ಟರು 'ನೀವು ಊಟ ಮುಗಿಸಿಯೇ ಹೋಗಿ ಭಾವ. ಬೇಕಾದರೆ ನಾನೇ ಅಡುಗೆ ಮಾಡುತ್ತೇನೆ' ಎಂದವರೇ 'ಖಂಡಿತವಾಗಿಯೂ ನಾನು ಸರೋಜಳಿಗಿಂತ ಚೆನ್ನಾಗಿ ಅಡುಗೆ ಮಾಡಬಲ್ಲೆ' ಎಂದು ನಗುತ್ತಾ ಮೇಲೆದ್ದರು. ರಾಯರು 'ಅದೆಲ್ಲಾ ಬೇಡ ಭಾವ. ನಾವು ಬೇಕಾದಷ್ಟು ಹರಟೆ ಹೊಡೆಯೋಣ, ಸರೋಜಾಳೇ ಅಡುಗೆ ಮಾಡಲಿ' ಎಂದು ಹೇಳಿ ಸುಧೀರ್ ಶೆಟ್ಟರನ್ನು ಮತ್ತೆ ಮಾತಿಗೆ ಎಳೆದರು.

ಸರೋಜಮ್ಮ ಮಾಡಿದ ಸಾಂಬಾರಿನಲ್ಲಿ ಎಲ್ಲರೂ ಊಟ ತೀರಿಸಿ ಹೊರಡುವಾಗ ರಾತ್ರೆ ಒಂಭತ್ತು ಗಂಟೆಯಾಗಿತ್ತು. ರಾಯರು ಕಾರಿನಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಅಲ್ಲಿಗೆ ಬಂದ ಸುಧೀರ ಶೆಟ್ಟರು 'ನಿಜ ಹೇಳಿ ಭಾವ. ನೀವು ಮತ್ತೆ ರಾಂಪುರಕ್ಕೆ ಮರಳುವ ಯೋಜನೆ ಹಾಕಿದ್ದೀರಾ ಹೇಗೆ?'

ರಾಯರು ನಕ್ಕು 'ಅದು ನನ್ನ ಕೈಯಲ್ಲಿಲ್ಲ. ಎಲ್ಲಾ ನಿಮ್ಮ ತಂಗಿಯ ಕೈಯಲ್ಲಿದೆ' ಎಂದರು. ತಕ್ಷಣ ಸರೋಜಮ್ಮ 'ಹೌದೌದು, ಇವರು ಒಂದು ತುತ್ತು ಅನ್ನ ತಿನ್ನುವುದೂ ನನ್ನ ಒಪ್ಪಿಗೆ ಕೇಳಿಯೇ' ಎಂದು ವ್ಯಂಗ್ಯವಾಡಿದರು.

ರಾಯರು ಅದಕ್ಕೆ ಪ್ರತಿಕ್ರಿಯಿಸದೆ 'ಆಫ್‌ಕೋರ್ಸ್ ನನಗೂ ರಾಂಪುರಕ್ಕೆ ಹೋಗಬೇಕೆಂಬ ಮನಸ್ಸಿದೆ. ಸೀತಾಪುರವೆನ್ನುವುದು ಈ ಎರಡು ವರ್ಷದಲ್ಲಿ ಸಾಕುಸಾಕಾಗಿದೆ. 'ಮರಳಿ ಮಣ್ಣಿಗೆ' ಎನ್ನುವುದು ನಿಜಕ್ಕೂ ಒಂದು ಬೋಗಸ್ ಸ್ಲೋಗನ್. ಒಮ್ಮೆ ಪೇಟೆಗೆ ಹೋಗಿ ನೆಲೆಸಿದವರು ಮತ್ತೆ ತಪ್ಪಿಯೂ ಹಳ್ಳಿಯಲ್ಲಿ ಬದುಕಲು ಇಷ್ಟಪಡುವುದಿಲ್ಲ. ಇಷ್ಟಕ್ಕೂ ಹಳ್ಳಿಯಲ್ಲಿ ಪೇಟೆಯ ಸೌಲಭ್ಯಗಳ ಮಾತುಬಿಡಿ, ಕೂಲಿಗೆ ಜನಬೇಕು ಅಂದರೂ ಸಿಗುವುದಿಲ್ಲ. ಹಾಗಿರುವಾದ 'ಗೋ ಬ್ಯಾಕ್ ಟು ಸೋಯ್ಲ್' ಅನ್ನುವುದು ಎಷ್ಟುಸರಿ?' ಎಂದರು ಜೊತೆಗಿದ್ದ ಸದಾಶಿವ ಶೆಟ್ಟರ ಮುಖ ನೋಡುತ್ತ. ಶೆಟ್ಟರು 'ಹೌದು' ಎನ್ನುವಂತೆ ನಕ್ಕರು. ಅವರಿಗೂ ರಾಂಪುರದಿಂದ ಸೀತಾಪುರಕ್ಕೆ ಬಂದುಳಿದದ್ದು ತಪ್ಪು ಎಂಬಂತಾಗಿದೆ ಎನ್ನುವ ಸೂಕ್ಷ್ಮ ಆಗಲೇ ರಾಯರಿಗೆ ತಿಳಿದಿತ್ತು.

ಸುಧೀರ್ ಶೆಟ್ಟರು ಮಾತ್ರ ದೊಡ್ಡದಾಗಿ ನಕ್ಕು 'ನನಗೇನೂ ಹಾಗೆನಿಸುವುದಿಲ್ಲ, ಯಾಕೆನ್ನಿ?'

'ಗೊತ್ತಿಲ್ಲ'

'ಸೇನೆಯಲ್ಲಿದ್ದವರಿಗೆ ಪೇಟೆಯೂ ಒಂದೇ, ಹಳ್ಳಿಯೂ ಒಂದೇ ಎಂಬ ಅನುಭವ ಆಗಿರುತ್ತದೆ ಮತ್ತು ಈ ಎರಡಕ್ಕೂ ಒಗ್ಗಿಕೊಳ್ಳುವ ಹಾಗೆ ಬದುಕಲು ಗೊತ್ತಿರುತ್ತದೆ'.

'ಅದು ನಿಮ್ಮ ಅಭಿಪ್ರಾಯ ಭಾವ. ಎಲ್ಲರೂ ನಿಮ್ಮ ಹಾಗೆ ಇರುವುದಿಲ್ಲ'.

ಮತ್ತೆ ಮಾತು ಮುಂದುವರಿಯಲಿಲ್ಲ. 'ಬೈ ಬೈ' ಎನ್ನುತ್ತ ರಾಯರು ಕಾರು ಸ್ಟಾರ್ಟ್ ಮಾಡಿದರು.

ಮರುದಿನ ವಾಕಿಂಗ್‌ನ ಹೊತ್ತು ನಡುರಸ್ತೆಯಲ್ಲಿ ನಡಿಗೆ ನಿಲ್ಲಿಸಿ ಸದಾಶಿವಶೆಟ್ಟರ ಹೆಗಲಮೇಲೆ ಕೈ ಇಟ್ಟ ರಾಯರು, 'ನಾಳೆ ರಾತ್ರೆ ನಾನು ರಾಂಪುರಕ್ಕೆ ಹೋಗಬೇಕು ಎಂದು ನಿರ್ಧರಿಸಿದ್ದೇನೆ. ಜಯಂತಿಯ ಪತ್ರವನ್ನು ಇಗ್ನೋರ್ ಮಾಡಲಿಕ್ಕಾಗುತ್ತಾ ಹೇಳಿ?' ಎಂದು ಪ್ರಶ್ನಿಸಿದರು.

'ಹೌದು ನೀವು ಹೋಗಲೇಬೇಕು, ಹೋಗಿ ಬನ್ನಿ. ಆದರೆ ಎಷ್ಟು ದಿನ ಅಲ್ಲಿ ನೀವು ಉಳಕೊಳ್ಳುವ ಪ್ಲಾನ್?'

'ಜಯಂತಿ ಪತ್ರದಲ್ಲಿ ಬರೆದದ್ದನ್ನು ನೀವೂ ಓದಿದ್ದೀರಲ್ಲ? ಅವಳ ಮಗಳ ಡೈವೋರ್ಸಿನ ವಿಚಾರದಲ್ಲಿ ನನ್ನ ನೆರವು ಬೇಕು ಎನ್ನುವುದು ಅವಳ ಅಪೇಕ್ಷೆ. ಅವಳಿಗೆ ಒಂದು ವರುಷದಿಂದ ವಕೀಲರ ಬಳಿಗೆ ಓಡಾಡಿ ಸಾಕಾಗಿದೆಯಂತೆ. ಅವಳ ಕುಟುಂಬದಲ್ಲಿ ಹೆಣ್ಮಕ್ಕಳು ಮಾತ್ರ ಇದ್ದು ಯಾರೂ ಅವರ ನೆರವಿಗೆ ಬರುತ್ತಿಲ್ಲವಂತೆ. ನೀವೊಬ್ಬರು ಬಲವಾಗಿ ನಿಂತು ಒಂದು ಗಟ್ಟಿ ನಿರ್ಧಾರ ಕೈಕೊಂಡರೆ ನನ್ನ ದಾರಿ ಸುಗಮವಾದೀತು ಎನ್ನುವುದು ಜಯಂತಿಯ ಆಸೆ. ಪಾಪ, ಆಕೆಗೆ ಒಬ್ಬಳೇ ತಾನೇ ಮಗಳು? ಅಂಥ ಮಗಳಿಗೆ ಡೈವೋರ್ಸ್ ಅನಿವಾರ್ಯ ಎನ್ನುವ ಸ್ಥಿತಿ ಕ್ರಿಯೇಟ್ ಆಗಿದೆ ಎಂದರೆ ಎಷ್ಟು ಕಷ್ಟ ನೋಡಿ'.

ಸದಾಶಿವ ಶೆಟ್ಟರು 'ಹೌದಲ್ಲ?' ಎಂದರು. ಆಮೇಲೆ ನೆನಪಿಸಿಕೊಂಡವರಂತೆ 'ಜಯಂತಿಯ ಅಳಿಯ ವಕೀಲ ಅಂತ ಕಾಣುತ್ತದೆ ಅಲ್ಲವಾ? ನೀವೇ ಹಿಂದೆ ಹೇಳಿದ ನೆನಪು ನನಗೆ' ಎಂದರು.

'ಎಸ್. ಆತ ವಕೀಲನಾದದ್ದೇ ಈಗಿರುವ ಸಮಸ್ಯೆ. ಬೇರೆ ಯಾರಾದರೂ ಆಗಿದ್ದರೆ ಈ ಡೈವೋರ್ಸ್ ಕೇಸು ಇಷ್ಟು ದೀರ್ಘಕಾಲದ ತನಕ ಮುಂದುವರಿಯುತ್ತಿದ್ದಿಲ್ಲ. ಒಂದಾರು ತಿಂಗಳಲ್ಲಿ ಫ್ಯಾಮಿಲಿ ಕೋರ್ಟಿನಲ್ಲಿ ಇತ್ಯರ್ಥವಾಗುತ್ತಿತ್ತು. ಈಗ ಜಿಲ್ಲಾಮಟ್ಟದಲ್ಲೂ ಫ್ಯಾಮಿಲಿ ಕೋರ್ಟುಗಳು ಇವೆಯಂತೆ. ಅಂದರೆ ವಿಚ್ಛೇದನ ಕೇಸುಗಳೆಲ್ಲ ಏರುತ್ತಲೇ ಇವೆ ಎನ್ನುವುದು ಅದರ ಅರ್ಥ'.

'ಹೌದೌದು, ನನ್ನ ದೊಡ್ಡಣ್ಣನ ಹೆಂಡತಿಯ ಪೈಕಿಯಲ್ಲಿ ಈಚೆಗೆ ಒಂದು ಡೈವೋರ್ಸ್ ಆಯ್ತು ಎಂಬ ಸುದ್ದಿ ಯಾವುದೋ ಮೂಲದಿಂದ ನನಗೂ ಬಂದಿತ್ತು. ನಾನು ಅದರ ಡಿಟೇಲ್ಸ್ ಏನು? ಎತ್ತ? ಎಂದು ಕೇಳಲಿಕ್ಕೆ ಹೋಗಲಿಲ್ಲ' ಎಂದು ಹೇಳಿದ ಶೆಟ್ಟರು, 'ಈಗ ಜಯಂತಿಯ ಮಗಳ ಡೈವೋರ್ಸಿಗೆ ಕಾರಣ ಏನಾದರೂ ನಿಮ್ಮ ಅನುಭವಕ್ಕೆ ಬಂದಿದೆಯಾ?' ಎಂದು ರಾಯರನ್ನು ಪ್ರಶ್ನಿಸಿದರು.

(ಸಶೇಷ)